**<u>ಸಾಕ್ಷಿಗೆ ದಿನಾಂಕಃ 05.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.Vasante Gowda ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು** ನಿ.ಪಿ.**2** ಎಂದು, **ಸ್ಥಳ ಪಂಚನಾಮೆಯನ್ನು** ನಿ.ಪಿ.**3** ಎಂದು, **ಕಚ್ಚಾ ನಕ್ಷೆಯನ್ನು** ನಿ.ಪಿ.**4** ಎಂದು, ವಾಹನ ಅಮಾನತ್ತು ಪಂಚನಾಮೆಯನ್ನು ನಿ.ಪಿ.**5** ಎಂದು, **ಐ.ಎಂ.ವಿ ವರದಿಯನ್ನು** ನಿ.ಪಿ.**6** ಎಂದು, ಗಾಯದ ಪ್ರಮಾಣ ಪತ್ರವನ್ನು ನಿ.ಪಿ.**7** ಎಂದು, ಮತ್ತು ಅಂತಿಮ ವರದಿಯನ್ನು ನಿ.ಪಿ.**8** ಎಂದು ಗುರುತಿಸಿದೆ.

**ಸೂಚನೆಃ** ನಿ.ಪಿ.1 ರಿಂದ ನಿ.ಪಿ.8 ಎಂದು ಗುರುತು ಆಗಿರುವ ದಾಖಲೆಗಳು ಹೆಬ್ಬೂರು ಪೋಲಿಸರು ನೀಡಿರುವಂತಹ ಯಥಾ ನಕಲುಗಳು ಆಗಿವೆ.

3) ಈಗ ಸಾಕ್ಷಿದಾರರು ತಮ್ಮ ಮೂಲ ಡಿಎಲ್ ದಾಖಲೆ ಮತ್ತು ಇದೇ ದಾಖಲೆಯ ಫೋಟೋ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಯನ್ನು ಮತ್ತು ಫೋಟೋ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಯನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಯನ್ನು **ನಿ.ಪಿ.9** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

4) **ಡಿಸ್ಚಾರ್ಜ್ ಸಮ್ಮರಿ ಅನ್ನು** ನಿ.ಪಿ.**10** ಎಂದು, ಒಟ್ಟು **15** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**11** ಎಂದು ಗುರುತಿಸಿದೆ. ಒಟ್ಟು **11 Prescriptions** ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**12** ಎಂದು ಗುರುತಿಸಿದೆ.

5) **C.T.Scan** ವರದಿಯನ್ನು ನಿ.ಪಿ.**13** ಎಂದು, ಮತ್ತು **C.T.Brain** ವರದಿಯನ್ನು ನಿ.ಪಿ.**14** ಎಂದು ಗುರುತಿಸಿದೆ.

6) ಆದ ಕಾರಣದಿಂದ ಪ್ರಾರ್ಥನೆಯಂತೆ ಪರಿಹಾರವನ್ನು ನನಗೆ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿ:</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದ:</u>**

ಸದರಿ ಎದುರುದಾರರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆ: ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.